ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/308/ಸುತ್ತೋಲೆ/2018-19/ಸೇವಿ-2

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:26/4/ 2019

**<u>ಸುತ್ತೋಲೆ</u>**

**ವಿಷಯ:** ಸೇವಾಪೂರ್ವಾ ಅವಧಿ ಘೋಷಿಸುವ ಬಗ್ಗೆ.

*****

ಎಲ್ಲಾ ಕಾಲೇಜು ಶಿಕ್ಷಣ ಇಲಾಖಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಮತ್ತು ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೂ ಈ ಮೂಲಕ ತಿಳಿಸುವುದೇನೆಂದರೆ, 2017ನೇ ಸಾಲಿನಲ್ಲಿ ನೇಮಕಾತಿ ಹೊಂದಿರುವ ಸಹಾಯಕ ಪ್ರಾಧ್ಯಾಪಕರುಗಳ ಸೇವಾಪೂರ್ವಾ ಅವಧಿ ಘೋಷಿಸುವ ಸಂಬಂಧ ನಿಯಮಾನುಸಾರ ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ತಿಳಿಸಿರುವಂತೆ ದಾಖಲೆಗಳನ್ನು ಪಡೆದು ಪರಿಶೀಲಿಸಿ, ಸದರಿ ಪೂರಕ ದಾಖಲೆಗಳ ಧೃಢೀಕೃತ ದ್ವಿಪ್ರತಿಗಳು ಹಾಗೂ ಮೂಲ ಸೇವಾಪುಸ್ತಕಗಳನ್ನೊಳಗೊಂಡಂತೆ ಪ್ರಾಂಶುಪಾಲರ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ. ಅಗತ್ಯ ದಾಖಲೆಗಳನ್ನು ಸಲ್ಲಿಸದೆ ಅನಗತ್ಯ ಪತ್ರ ವ್ಯವಹಾರಕ್ಕೆ ಆಸ್ಪದ ನೀಡಬಾರದೆಂದು ಸೂಚಿಸಿದೆ.

**ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು**

**ಇವರಿಗೆ:-**

1. ಜಂಟಿ ನಿರ್ದೇಶಕರ ಕಛೇರಿ, ಬೆಂಗಳೂರು/ಮಂಗಳೂರು/ಧಾರವಾಡ/ಗುಲ್ಬರ್ಗಾ/ಮೈಸೂರು/ ಶಿವಮೊಗ್ಗ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
4. ಹೆಚ್ಚಿನ ಪ್ರತಿ.
5. ಕಛೇರಿ ಪ್ರತಿ.

## ಸಹಾಯಕ ಪ್ರಾಧ್ಯಾಪಕರುಗಳ ಪರೀಕ್ಷಾರ್ಥ ಸೇವಾ ಅವಧಿಯನ್ನು ಘೋಷಿಸುವ ಬಗ್ಗೆ ತಾಳೆ ಪಟ್ಟಿ

| | | |
|---|---|---|
| 1. | ಹೆಸರು ಮತ್ತು ಪದನಾಮ | |
| 2. | ನೇಮಕಾತಿ ಆದೇಶ ಸಂಖ್ಯೆ & ದಿನಾಂಕ | |
| 3. | ಸೇವೆಗೆ ಸೇರಿದ ದಿನಾಂಕ | |
| 4. | <u>ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ನಿಗದಿಪಡಿಸಲಾದ ಇಲಾಖಾ ಪರೀಕ್ಷೆಗಳು</u><br>1. ಅಕೌಂಟ್ಸ್ ಹೈಯರ್<br>2. ಜನರಲ್ ಲಾ ಭಾಗ-1<br>3. ಜನರಲ್ ಲಾ ಭಾಗ-2<br>4. ಕನ್ನಡ ಭಾಷಾ ಪರೀಕ್ಷೆ<br>5. ಓರಿಯಂಟೇಷನ್ ಕೋರ್ಸ್ | ಪರೀಕ್ಷೆಗಳನ್ನು ಉತ್ತೀರ್ಣರಾದ ದಿನಾಂಕ |
| 5. | ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ | |
| 6. | ಪರೀಕ್ಷಾರ್ಥ ಸೇವಾವಧಿಯಲ್ಲಿ ಪಡೆದಿರುವ ವೇತನ ರಹಿತ ರಜೆ/ಅಸಾಧಾರಣ ರಜೆಗಳನ್ನು ನಿಗದಿತ ಪ್ರಾಧಿಕಾರವು ಸಕ್ರಮಗೊಳಿಸಿರುವ/ಮಂಜೂರು ಮಾಡಿರುವ ಬಗ್ಗೆ ಆದೇಶದ ಪ್ರತಿಗಳೊಂದಿಗೆ ಮಾಹಿತಿ ಹಾಗೂ ವಿವರಣೆಗಳನ್ನು ಸೇವಾ ಪುಸ್ತಕದಲ್ಲಿ ಕಡ್ಡಾಯವಾಗಿ ನಮೂದಿಸಿ ಸಲ್ಲಿಸತಕ್ಕದ್ದು. | |
| 7. | 1. ಪರೀಕ್ಷಾರ್ಥ ಸೇವಾವಧಿಯಲ್ಲಿ ಇಲಾಖಾ ವಿಚಾರಣೆ ನಡೆಸಲಾಗಿದ್ದು ವಿಚಾರಣಾ ಪೂರ್ಣಗೊಂಡಿದ್ದಲ್ಲಿ ವಿಧಿಸಲಾಗಿರುವ ಶಿಕ್ಷೆ ಮತ್ತು ಆದೇಶದ ವಿವರಗಳು ಹಾಗೂ ಸಂಬಂಧಿಸಿದ ಪ್ರತಿಗಳು (ಸೇವಾಪುಸ್ತಕದಲ್ಲಿ ವಿವರಗಳನ್ನು ದಾಖಲಿಸಿ ಧೃಢೀಕರಿಸಿರತಕ್ಕದ್ದು)<br>2. ಇಲಾಖಾ ವಿಚಾರಣೆ ಬಾಕಿ ಇರುವ/ಇಲ್ಲದಿರುವ ಬಗ್ಗೆ ದಾಖಲಾತಿ | |

**ಸೂಚನೆ:**

1. ಇಲಾಖಾ ಪರೀಕ್ಷೆಗಳನ್ನು ವಿಳಂಬವಾಗಿ ಪೂರೈಸಿದ್ದಲ್ಲಿ ಸದರಿ ಪರೀಕ್ಷೆಗಳ ಫಲಿತಾಂಶ ಪ್ರಕಟವಾಗಿರುವ ಗೆಜೆಟ್ ಪ್ರತಿಯನ್ನು ಒದಗಿಸುವುದು.
2. ಕಂಪ್ಯೂಟರ್ ಸಾಕ್ಷರತಾ ಪರೀಕ್ಷಾ ನಿಯಮಗಳಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ/15/ಸೇವನೆ/2017, ದಿ:16.12.2017ರಲ್ಲಿ ಮಾಡಲಾದ ತಿದ್ದುಪಡಿಯನ್ವಯ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ದಿ:22.03.2020ರೊಳಗೆ ಉತ್ತೀರ್ಣರಾಗಲು ಅವಕಾಶ ಕಲ್ಪಿಸಿರುವುದರಿಂದ ಸೇವಾ ಪೂರ್ವ ಅವಧಿ ಘೋಷಣೆಗೆ ಉಳಿದ ಎಲ್ಲಾ ರೀತಿಯಿಂದ ಅರ್ಹರಿದ್ದಲ್ಲಿ, ಸೇವಾ ಪೂರ್ವ ಅವಧಿ ಘೋಷಣೆಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಆಯ್ಕೆಗೊಂಡು ವಿವಿಧ ದಿನಾಂಕಗಳಂದು ಹೊರಡಿಸಲಾದ ಆದೇಶಗಳನ್ವಯ ಸ್ಥಳನಿಯುಕ್ತಿ ಹೊಂದಿರುವ ಸಹಾಯಕ ಪ್ರಾಧ್ಯಾಪಕರುಗಳ ಸ್ಥಳನಿಯುಕ್ತಿ ಆದೇಶದಲ್ಲಿ ವಿಧಿಸಲಾಗಿರುವ ಷರತ್ತನ್ನು ಈ ಕಛೇರಿ ತಿದ್ದುಪಡಿ ಆದೇಶ ಸಂಖ್ಯೆ:ಕಾಶಿಇ/212/ಸಪ್ರಾನೇಬ/2016-17/ನೇವಿ-1 ದಿನಾಂಕ:15/10/2018ರನ್ವಯ ತಿದ್ದುಪಡಿಗೊಳಸಲಾಗಿದೆಯೆಂಬ ಅಂಶವನ್ನು ಗಮನಿಸತಕ್ಕದ್ದು.
3. ಪರೀಕ್ಷಾರ್ಥ ಸೇವಾ ಅವಧಿಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವರ್ಷಗಳ ಕಾರ್ಯನಿರ್ವಹಣಾ/ಸ್ವಯಂಮೌಲೀಕರಣ ವರದಿಗಳನ್ನು ಕೇಂದ್ರಕಛೇರಿಗೆ ರವಾನಿಸಲಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.

ಮೇಲ್ಕಂಡ ಎಲ್ಲಾ ಧೃಢೀಕೃತ ದಾಖಲಾತಿಗಳನ್ನು ದ್ವಿಪ್ರತಿಗಳಲ್ಲಿ ಸಲ್ಲಿಸುವುದು ಹಾಗೂ ಸೇವಾಪುಸ್ತಕವನ್ನು ನಿಯತಗೊಳಿಸಿ ಸತ್ಯಪನ್ನ ಮಾಡಿ ಕಳುಹಿಸುವುದು.

ಪ್ರಾಂಶುಪಾಲರು

ಸಹಿ/ಮೊಹರಿನೊಂದಿಗೆ